**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿಜೆಎಂ, ರಾಯಚೂರು**
**ಸಿ.ಸಿ.ನಂಬರು. 3963/2021**

**CW-15 / PW- 12**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಸೈಯದ್ ವಲಿ |
| ತಂದೆ ಹೆಸರು | ಃ | ಹುಸೇನಸಾಬ |
| ವಯಸ್ಸು | ಃ | 62 ವರ್ಷ |
| ಉದ್ಯೋಗ | ಃ | ನಿವೃತ್ತಿದಾರ |
| ವಿಳಾಸ | ಃ | ರಾಯಚೂರು |

**ಮುಖ್ಯ ವಿಚಾರಣೆ ಅಬಿಯೋಜನೆ ಪರ ಮಾನ್ಯ ಹಿರಿಯ ಸ.ಸ.ಅ.ಅವರಿಂದ**
**ಪ್ರಮಾಣೀಕರಿಸಿದ ದಿನಾಂಕಃ 10-03-2025**

ನಾನು 2019 ರಿಂದ 2023 ವರೆಗೆ ಮಾರ್ಕಟ್ ಯಾರ್ಡ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಎಂದು ಕರ್ತವ್ಯ ಮಾಡಿದ್ದೇನೆ.

ದಿನಾಂಕ 24-03-2021 ರಂದು ಸಂಜೆ 06.00 ಗಂಟೆಗೆ ರಿಮ್ಸ ಆಸ್ಪತ್ರೆಗೆ ಹೋಗಿ ಚಾಸಾ-1 ರವರ ಹೇಳಿಕೆ ದೂರು ಪಡೆದು ಮರಳಿ ಸಂಜೆ 7.45 ಠಾಣೆಗೆ ಮರಳಿ ಠಾಣಾ ಗುನ್ನ ನಂಬರ 29/2021 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸಾಕ್ಷಿದಾರರು ಗುರುತಿಸಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಹಿಯನ್ನು ನಿಪಿ-1 ಎ ಎಂದು, ಪ್ರ.ವ ವರದಿಯನ್ನು ನಿಪಿ-10 ಎಂದು ಸಹಿಯನ್ನು ನಿಪ-10 ಎ ಎಂದು ಗುರುತಿಸಲಾಯಿತು. ಮರುದಿನ ಸಂಜೆ 04.30 ರಿಂದ 05.30 ಗಂಟೆ ವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-4 ರವರು ಸ್ಥಳ ತೋರಿಸಿದ ಮೇರೆಗೆ ಗುನ್ನ ಪಂಚನಾಮೆ ಮಾಡಿ ಒಂದು ಕಟ್ಟಿಗೆಯನ್ನು ಜಪ್ತಿ ಮಾಡಿಕೊಂಡಿರುತ್ತೇನೆ. ಅ ಸಮಯದಲ್ಲಿ 2 ಭಾವಚಿತ್ರಗಳನ್ನು ತೆಗೆದಿರುತ್ತೇನೆ . ಸಾಕ್ಷಿದಾರರು ಗುರುತಿಸಿದ ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಿದ್ದು ಸಹಿಯನ್ನು ನಿಪಿ-4 ಸಿ ಎಂದು, ಭಾವಚಿತ್ರಗಳನ್ನು ಈಗಾಗಲೇ ನಿಪಿ-2-3 ಎಂದು, ಕಟ್ಗಿಗೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮುಮಾ-1 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ-4-10 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಚಾಸಾ-5-6 ರವರು ನನ್ನ ಸಮಕ್ಷಮ ನಿಪಿ-5-6 ಹೇಳಿಕೆಗಳನ್ನು ನೀಡಿರುತ್ತಾರೆ. ಚಾಸಾ-9 ರವರು ನಿಪಿ-3 ರಂತೆ ಮತ್ತು ಚಾಸಾ-10 ರವರು ನಿಪಿ-7 ರಂತೆ ನನ್ನ ಸಮಕ್ಷಮ ಹೇಳಿಕೆಗಳನ್ನು ನೀಡಿರುತ್ತಾರೆ. ದಿನಾಂಕ 30.03.2021 ರಂದು ಪ್ರಕರಣದ ಆರೋಪಿತರ ಪತ್ತೆ ಕುರಿತು ಚಾಸಾ-11 ರವರನ್ನು ಕಳುಹಿಸಿದ್ದು ಸದರಿ ಆರೋಪಿತರ ಪತ್ತೆಗಾಗಿ ಹರಿಜನವಾಡ, ಗದ್ವಾಲ ರಸ್ತೆ ಮತ್ತು ಮಡ್ಡಿಪೇಟೆ ಕಡೆ ಹೋಗಿ

ನೋಡಲಾಗಿ ಆರೋಪಿತರು ಸಿಕ್ಕಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ವರದಿಯನ್ನು ನಿಪಿ-11 ಎಂದು ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು. ದಿನಾಂಕ 10.04.2021 ರಂದು ಪ್ರಕರಣದ ಆರೋಪಿತರ ಪತ್ತೆ ಕುರಿತು ಚಾಸಾ-12 ರವರನ್ನು ಕಳುಹಿಸಿದ್ದು ಸದರಿ ಆರೋಪಿತರ ಪತ್ತೆಗಾಗಿ ಹರಿಜನವಾಡ, ಗದ್ವಾಲ ರಸ್ತೆ ಮತ್ತು ಮಡ್ಡಿಪೇಟೆ ಕಡೆ ಹೋಗಿ ನೋಡಲಾಗಿ ಆರೋಪಿತರು ಸಿಕ್ಕಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ವರದಿಯನ್ನು ನಿಪಿ-12 ಎಂದು ಸಹಿಯನ್ನು ನಿಪಿ-12 ಎ ಎಂದು ಗುರುತಿಸಲಾಯಿತು. ದಿನಾಂಕ 15.05.2021 ರಂದು ಪ್ರಕರಣದ ಆರೋಪಿತರ ಪತ್ತೆ ಕುರಿತು ಪುನಃ ಚಾಸಾ-12 ರವರನ್ನು ಕಳುಹಿಸಿದ್ದು ಸದರಿ ಆರೋಪಿತರ ಪತ್ತೆಗಾಗಿ ಹರಿಜನವಾಡ, ಗದ್ವಾಲ ರಸ್ತೆ ಮತ್ತು ಮಡ್ಡಿಪೇಟೆ ಕಡೆ ಹೋಗಿ ನೋಡಲಾಗಿ ಆರೋಪಿತರು ಸಿಕ್ಕಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ವರದಿಯನ್ನು ನಿಪಿ-13 ಎಂದು ಸಹಿಯನ್ನು ನಿಪಿ-13 ಎ ಎಂದು ಗುರುತಿಸಲಾಯಿತು. ದಿನಾಂಕ 17.05.2021 ರಂದು ಚಾಸಾ-13 ರವರು ಚಾಸಾ-1 ರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ವೈಧ್ಯಕೀಯ ಪ್ರಮಾಣ ಪತ್ರ, ಸಿಟಿ ಸ್ಕ್ಯಾನ್ ಮತ್ತು ಕ್ಷಕಿರಣ ವರದಿಗಳನ್ನು ನೀಡಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ಸದರಿ ದಾಖಲಾತಿಗಳನ್ನು ಈಗಾಗಲೇ ನಿಪಿ-8 ಎಂದು ಗುರುತಿಸಿದ್ದು ಸಹಿಯನ್ನು ನಿಪಿ-8 ಬಿ ಎಂದು ಗುರುತಿಸಲಾಯಿತು. ದಿನಾಂಕ 24.06.2021 ರಂದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದರಿಂದ ಅವರನ್ನು ದಸ್ತಗಿರಿ ನಿಯಮಗಳನ್ನು ಅನುಸರಿಸಿರುತ್ತೇವೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 2 ನೇ ಆರೋಪಿ ಇಂದು ಹಾಜರು ಇದ್ದು 1 ಮತ್ತು 3 ಆರೋಪಿತರು ಗೈರು ಹಾಜರು ಇದ್ದು ಗುರುತಿನ ಬಗ್ಗೆ ವಕೀಲರು ತಕರಾರು ಇಲ್ಲವೆಂದು ಹೇಳಿದ್ದರಿಂದ ಗುರುತಿಸಲಾಯಿತು ಎಂದು ತೆಗೆದುಕೊಳ್ಳಲಾಯಿತು. ದಿನಾಂಕ 25.06.2021 ರಂದು ನಿಪಿ-8 ದಾಖಲಾತಿಗಳ ಆಧಾರದ ಮೇಲೆ ಕಲಂ 324 ಕೈಬಿಟ್ಟು ಕಲಂ 326 ಅನ್ನು ಸೇರ್ಪಡೆ ಮಾಡಿ ಆರೋಪಿತರ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಎಲ್.ಎ.ಡಿ.ಸಿ ವಕೀಲರಿಂದ</u>

ಚಾಸಾ-1 ರವರಿಗೆ ಈ ಪ್ರಕರಣದಲ್ಲಿ ಘಟನೆ ನಡೆದಿದ್ದು ದಿನಾಂಕ 21.03.2021 ಮತ್ತು ಚಾಸಾ-1 ರವರು 24.03.2021 ರಂದು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ತಮ್ಮ ಹಿರಿಯರಿಗೆ ಕೇಳಿ ತಿಳಿಸಿದ್ದರಿಂದ 3 ದಿನಗಳು ದೂರು ನೀಡಲು ತಡವಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಚಾಸಾ-1 ರವರು ನಮ್ಮ ತನಿಖೆ ಪ್ರಕಾರ ಆಸ್ಪತ್ರೆಗೆ ದಿನಾಂಕ 24.03.2021 ರಂದು ದಾಖಲಾಗಿರುತ್ತಾರೆ. ಚಾಸಾ-1 ರವರು 3 ದಿನಗಳ ನಂತರ ಆಸ್ಪತ್ರೆಗೆ ದಾಖಲಾದ ಬಗ್ಗೆ ವಿಚಾರಣೆ ಮಾಡಿಲ್ಲ. ಚಾಸಾ-1 ರವರ ಅಜ್ಜಿಯ ವಿರುದ್ಧ. ಆರೋಪಿತರ

ನಡುವೆ ಆಸ್ತಿಯ ಬಗ್ಗೆ ವೈಶಮ್ಯ ಇರುತ್ತದೆ ಎಂದರೆ ಸರಿ. ದಿನಾಂಕ 24.03.2021 ರಂದು ಚಾಸಾ-1 ರವರು ರಸ್ತೆ ಅಪಘಾತದಲ್ಲಿ ಗಾಯಗೊಂಡಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆ ಎಂದು ನಮ್ಮ ತನಿಖೆಯಲ್ಲಿ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರು ಸಹ ಚಾಸಾ-1 ರವರಿಂದ ಸುಳ್ಳು ದೂರು ಪಡೆದು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತನಿಖೆಯನ್ನು ಆರೋಪಿತರ ವಿರುದ್ಧ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳುಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಉಖ್ತಲೇಖನ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)**

**ಪ್ರಧಾನ ಹಿರಿಯ ಸಿ.ಜೆ ಮತ್ತು ಸಿಜೆಎಂ, ರಾಯಚೂರು.**